ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶನಿವಾರ ದಿನಾಂಕ ೧೫ನೇ ಅಕ್ಟೋಬರ್ ೧೯೮೮ ಆಶ್ವಯುಜ ೨೩; ೧೯೧೦ ಶಕ.

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೯-೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದರು.]

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಕಾರ್ಯದರ್ಶಿ, (ಕರ್ನಾಟಕ ವಿಧಾನಮಂಡಲ).—ವಿಧಾನ ಪರಿಷತ್ತಿನಿಂದ ಅಂಗೀಕಾರವನ್ನು ಪಡೆದ ೧೯೮೮ನೇ ಇಸವಿಯ ಕರ್ನಾಟಕ ವಿಶ್ವವಿದ್ಯಾನಿಲಯಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಸಭೆಯು ಮುಂದಿಡಲಾಯಿತು. ಮುಂದಿನದ್ದು ಗಮನಸೆಳೆಯುವ ಸೂಚನೆ.

ಶ್ರೀ ಪಂಪಾಪತಿ.—ಅಧ್ಯಕ್ಷರೇ, ಇದು ಬಹಳ ಮುಖ್ಯವಾದ ಪ್ರಶ್ನೆ. ಇದನ್ನು ತಾವು ಕಡೆಗಣಿಸಂ ತ್ತಿದ್ದೀರಿ. ಬಗರ್‌ಹುಕುಂ ಸಾಗುವಳಿಗಾರರದ್ದು...

ಅಧ್ಯಕ್ಷರು.—ಮೊದಲು ಗಮನ ಸೆಳೆಯುವ ಸೂಚನೆ ಮುಂಗಿಯಲಿ,

ಶ್ರೀ ಪಂಪಾಪತಿ.—ಹಿಂದೆ ಸಂಮಾರು ಸಲ ಇದನ್ನು ಇಲ್ಲಿ ಎತ್ತಿದ್ದೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಹದಿನಾಲ್ಕು ಗಮನ ಸೆಳೆಯುವ ಸೂಚನೆಗಳಿವೆ. ಇವೆಲ್ಲಾ ಯಾವಾಗ ಆಗುವುದು? ಎಲ್ಲಾ ಬಹಳ ಮುಖ್ಯವಾದ ಸಮಸ್ಯೆಗಳೇ ಆದಾದಮೇಲೆ ಗವರ್ನ್‌ಮೆಂಟ್ ಕಾರ್ಯಕಲಾಪಗಳಿವೆ ಕಳೆದ ಹಲವಾರು ಅಧಿವೇಶಗಳಿಂದ ಪ್ರತಿಸಲವೂ ಈ ಸೂಚನೆಯನ್ನು ತರುವುದು ಆಮೇಲೆ ಅಡ್ಜರ್ನ್ ಮಾಡುವುದು ಆಗುತ್ತಿದೆ. ನಿನ್ನೆಯೇ ನೋಟೀಸ್ ಕೊಟ್ಟಿದ್ದೇವೆ,

ಅಧ್ಯಕ್ಷರು.—ಶ್ರೀ ವೆಂಕಟರಾಮಯ್ಯನವರೇ, ನೀವು ಸ್ವಲ್ಪ ನನ್ನ ಮಾತನ್ನು ಕೇಳುತ್ತೀರೋ ಇಲ್ಲವೋ? ಈ ತರಹ ಮಾತನಾಡುವುದು ಸರಿಯಲ್ಲ ಈ ನಿಯಮ ೬೮ರ ನೋಟೀಸನ್ನು ಈಗ ಕೊಟ್ಟಿದ್ದೀರಿ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ನಿನ್ನೆಯೇ ಕೊಟ್ಟಿದ್ದೇನೆ.

ಅಧ್ಯಕ್ಷರು.—ನಿನ್ನೆಯಲ್ಲ ಮೊನ್ನೆಯಲ್ಲ ಹದಿನೈದು ದಿನಗಳ ಹಿಂದೆಯೇ ಕೊಟ್ಟಿದ್ದೀರೆಂದು ತಿಳಿದುಕೊಳ್ಳಿ ಇವತ್ತು ಬೇಕಾದರೆ ಅದನ್ನು ಇಂದು ಮಧ್ಯಾಹ್ನ ತೆಗೆದುಕೊಳ್ಳೋಣ.

ಶ್ರೀ ಪಂಪಾಪತಿ.—ಇದು ಸಾಮಾನ್ಯ ಜನರ ಸಮಸ್ಯೆ ಸಾಮಾನ್ಯ ಜನರ ಬಗ್ಗೆ ನಾವು ಕಳಕಳಿಯ ಭಾವನೆಯಿಟ್ಟುಕೊಳ್ಳಬೇಕು.

ಅಧ್ಯಕ್ಷರು.—ತಾವು ಸ್ವಲ್ಪ ಕುಳಿತುಕೊಳ್ಳಿ, ಹೇಳುತ್ತೇನೆ ಸಮಾಧಾನದಿಂದ ಮಾತನಾಡುವುದನ್ನು ಕಲಿಯಿರಿ. ಎಲ್ಲರಿಗೂ ಅವಕಾಶ ಮಾಡಿಕೊಡಬೇಕು ಎನ್ನುವುದೇ ನನ್ನ ಉದ್ದೇಶ ನೀವು ಕೊಟ್ಟಿರುವ ಬಿಲ್ ಇವತ್ತು ಇದೆ. ಆಮೇಲೆ ಶ್ರೀ ಪಂಪಾಪತಿಯವರು ೬೮ರ ಪ್ರಕಾರ ನೋಟೀಸ್ ಕೊಟ್ಟಿದ್ದಾರೆ. ನಾನು ಮೊದಲೇ ಹೇಳಿದ್ದೇನೆ. ಬೇಕಾದರೆ ಗಮನ ಸೆಳೆಯುವ ಸೂಚನೆ ಅಂತ ಹೇಳಿ ಅದನ್ನು ತೆಗೆದು